## ಅಧ್ಯಾಯ ೨ – ಕಲಕತ್ತೆಗೆ ಆಗಮನ

(ಬಂಗಾಳಿಯಲ್ಲಿ 'ಶ್ರೀರಾಮಕೃಷ್ಣ ಪುಂಥಿ' ಎಂಬುದೊಂದು ಮಹಾಕಾವ್ಯ. ಶ್ರೀರಾಮಕೃಷ್ಣರ ಗೃಹಸ್ಥಶಿಷ್ಯರಲ್ಲಿ ಒಬ್ಬರಾದ ಶ್ರೀ ಅಕ್ಷಯ ಕುಮಾರ ಸೇನ್ ಅವರು ಇದನ್ನು ರಚಿಸಿದ್ದಾರೆ. ಇದರ ಭಾವವನ್ನು ಕನ್ನಡದಲ್ಲಿ ತರುವ ಪ್ರಾಮಾಣಿಕ ಪ್ರಯತ್ನವನ್ನು ಈ ಪದ್ಯಗಳಲ್ಲಿ ಕಾಣುತ್ತೇವೆ. ಹಲವು ವರ್ಷಗಳ ಹಿಂದೆ ಇದರ ಕೆಲವು ಭಾಗಗಳು 'ವಿವೇಕಪ್ರಭ'ದಲ್ಲಿ ಪ್ರಕಟವಾಗಿದ್ದವು. ಶ್ರೀರಾಮಕೃಷ್ಣರ ೧೭೫ ನೇ ಜನ್ಮಜಯಂತಿ ಮಹೋತ್ಸವದ ಅಂಗವಾಗಿ, ಶ್ರೀರಾಮಕೃಷ್ಣರ 'ಸಾಧನಾ ಭಾಗ' ದಿಂದ ಇದನ್ನು ಪುನರಾರಂಭಿಸುತ್ತಿದ್ದೇವೆ. ಈ ಪದ್ಯಗಳ ರಚನಕಾರರು ಶ್ರೀ ಕೆ.ಎಂ. ಹೆಗಡೆ, ಬೈರುಂಭೆ ಮತ್ತು ಶ್ರೀ ಮಂಜುನಾಥ ಭಾಗವತ, ಹೊಸ್ತೋಟ ಅವರು)

ಜಯರಾಮಕೃಷ್ಣ ವಾಂಛಿತ ಕಲ್ಪತರುವೆ ।
ಜಯಭಕ್ತ ಬಂಧು ಭಗವಾನ್ ಜಗದ್ಗುರುವೆ ॥

ಜಯರಾಮಕೃಷ್ಣರಾಪ್ತೇಷ್ಟ ಬಂಧುಗಳೆ ।
ನಯಭಯದಿ ಪಾದಧೂಳಿಯ ಬೇಡುತಿರುವೆ ॥

ಶ್ರೀರಾಮಕೃಷ್ಣ ಲೀಲಾ ಕಥನವಿದನು ।
ಭಕ್ತಿಯಿಂ ಕೇಳಿದವ ಧನ್ಯನಾಗುವನು ॥೧॥

ಶಾಂತಿ ಸಂತೋಷದಲಿ ಮನವು ಅರಳುವುದು ।
ಸಕಲ ತಾಪತ್ರಯವು ದೂರವಾಗುವುದು ॥೨॥

ಹಗುರವಪ್ಪುದು ಹೃದಯ ಚಿತ್ತಶುದ್ಧಿಯಲಿ ।
ಕಲುಷಕಲ್ಮಷ ಕರಗಿ ವಿಮಲಮನ ಬೆಳಗಿ ॥೩॥

ಪರಿಶುದ್ಧವಾದ ಹೃದಯಕನ್ನಡಿಯಲಿ ।
ಗುರುದೇವನಾ ಬಿಂಬ ರಾಜಿಸುವುದಲ್ಲಿ ॥೪॥

ಗತಸಂಗತಿಗಳೆಲ್ಲ ಮಾಯವಾಗುವದು ।
ಹೊಸ ಬದುಕು ದೊರೆತಂತೆ ಭಾಸವಾಗುವುದು ॥೫॥

ಬಯಲ ಬಯಕೆಗಳೆಲ್ಲ ಹಾರಿಹೋಗುವವು ।
ಹರಿದಾಡುವಾ ಮನಕೆ ಸ್ಥಿರತೆ ದೊರೆಯುವದು ॥೬॥

ಸಂಶಯದ ಕತ್ತಲೆಯ ಕಾಟವೇ ಇಲ್ಲಿಲ್ಲ ।
ಭವಭಯದ ಬಂಧ ಹರಿಯುವದು ಸುಳ್ಳಲ್ಲ ॥೭॥

ಮಾಯೆ ಬೀಸಿದ ಪಾಶ ಸೋಂಕದೈ ನರಗೆ ।
ಈ ಬಗೆಗೆ ಮಾಯೆಯೇ ಮರುಗುವಳು ಕಡೆಗೆ ॥೮॥

ಗುರುದೇವನಾ ಮಹಿಮೆಗೊಲಿದು ತಲೆವಾಗಿ ।
ಕರಗುವಳು ತಾನಾಗಿ ತತ್ವವನು ಗ್ರಹಿಸಿ ॥೯॥

ಗುರುದೇವನಾ ಲೀಲೆಯೊಂದು ಸಾಗರವು ।
ಕಲಿಯುಗದಿ ಶುಭದಲೆಯನೇಳಿಸುತಲಿಹುದು ॥೧೦॥

ತನ್ನ ಕಿರುಬೆರಳಿನಂಚಿನೊಳು ಜಗವನ್ನು ।
ಕಾಣಿಸುವ ಗುರುದೇವ ಸಾಮಾನ್ಯನೇನು ॥೧೧॥

ಅವನ ಮಹಿಮೆಯ ಕಂಡು ತಿಳಿದವರು ಯಾರು ।
ಅನವರತ ಸ್ಮರಿಸಿದರು ಅರ್ಥವಾಗದದು ॥೧೨॥

ಯಾರ ಹೃದಯದೊಳಗವನ ಲೀಲೆಗಿಂಬಿಹುದೊ ।
ಆ ಅರಿವು ಗುರಿಯತ್ತ ಕೊಂಡೊಯ್ಯುತಿಹುದು ॥೧೩॥

ಎಂತು ವರ್ಣಿಸಲಿ ಗುರುದೇವನಾ ಮಹಿಮೆ ।
ಅತಿಶಯೋಕ್ತಿಯಿದಲ್ಲ ಹಾಗುಂಟು ಹಿರಿಮೆ ॥ ೧೪॥

ಸರಿಯಾದ ಸಂದರ್ಭಕಾಗಿ ಕಾದಿರುವೆ ।
ಬರೆದದನು ಕಾಣಿಸುವ ಬಯಕೆಯಾಂತಿರುವೆ ॥೧೫॥

ಅವತಾರವಿದರೊಳಗೆ ಆ ಆದಿಪುರುಷ ।
ವ್ಯಕ್ತನಾಗಿಯೆ ಕಾಣಿಸಿದನು ಬುಧವೇಷ ॥೧೬॥

ವಿನಯವೇ ಆಭರಣವಾಗಿರ್ದುದವಗೆ ।
ಮೂಲ ಸ್ವರೂಪದಾ ಪ್ರತಿಬಿಂಬವಾಗಿ ॥೧೭॥

ಬಾಹ್ಯದಾ ಬಾಳುವಿಕೆ ಬಡ ಬ್ರಾಹ್ಮಣನದು ।
ಸಂಶಯವು ಸರಿದಾಗ ಸತ್ಯ ಕಾಣುವುದು ॥೧೮॥

ಬಹಿರಂಗದಾ ಮುಸುಕು ಸರಿಸಿ ಕಂಡಾಗ ।
ಅಂತರಂಗದ ಮಿಂಚು ಸುಳಿಯುವುದು ಆಗ ॥೧೯॥

ಮೇಲುಕೀಳುಗಳೆಂಬ ಭಾವ ಅವಗಿಲ್ಲ ।
ದೀನರೊಳು ಅನುಕಂಪವಿತ್ತು ಸುಳ್ಳಲ್ಲ ॥೨೦॥

ನೋವನನುಭವಿಸುವರ ಸಂತೈಸುತಿರ್ದ ।
ಜೀವ ಜೀವನದಿರವ ಬೋಧಿಸುತ್ತಿರ್ದ ॥೨೧॥

ಆಡಂಬರವ ಅವನು ಅರಿತೇ ಇರಲಿಲ್ಲ ।
ಅವನಂತರಂಗದಲಿ ಕಪಟಕೆಡೆಯಿಲ್ಲ ॥೨೨॥

ಬಹಿರಂಗ ಅಂತರಂಗಗಳ ಹೊಂದಿಸುತ್ತಾ ।
ಅನವರತ ಸಾಧನೆಯ ಗೈದ ಶ್ರಮಿಸುತ್ತ ॥೨೩॥

ಅವನ ಅಭಿವ್ಯಕ್ತಿ ಭಾವನೆಯ ಪಡಿಯಚ್ಚು ।
ಜನಹಿತವೆ ಅವನ ಕಾಯಕದ ಸಂಪತ್ತು ॥೨೪॥

ಅನುಮಾನಕೆಡೆಯಿಲ್ಲ ಅವನ ಚರಿತೆಯೊಳು ।
ಘನಮಹಿಮೆ ಭೂಮಿಕೆಯ ವಹಿಸೆ ಭೂಮಿಯೊಳು ॥೨೫॥

•